ಕೈಗೆ ಕೊಡುತ್ತಾ ರವಿ, “ಸರ್ ನಾವೆಣಿಸಿದಂತೆ... ಯಾವುದೇ ಫೋರ್ಸ್ ಎಂಟ್ರಿ ಇಲ್ಲ... ಕ್ಲೀನ್...”

ಅವನ ಮೊಬೈಲ್‌ಗೆ ನಾಲ್ಕೈದು ಮೆಸೇಜ್‌ಗಳು ಬಂದವು ಅದನ್ನು ನೋಡಿದ ತಕ್ಷಣ ಧನಂಜಯನ ಮುಖ ಅರಳಿತು.

“ರವೀ ನಾಲ್ಕು ಕಾನ್‌ಸ್ಟೆಬಲ್ ಕಳಿಸಿ ಆ ಜಯರಾಂನನ್ನು ನಿರ್ಮಲ್ ಮನೆಗೆ ಕರೆದುಕೊಂಡು ಬರಲು ಹೇಳು. ನೀನೂ ಇಬ್ಬರು ಕಾನ್‌ಸ್ಟೆಬಲ್‌ನೊಂದಿಗೆ ನಡೆ...” ಯಾಕೆ ಎಂದು ಅರ್ಥ ಆಗದಿದ್ದರೂ... ಏನೋ ದೊಡ್ಡ ಸುಳಿವು ಸಿಕ್ಕಿದೆ ಅಂತ ಅರ್ಥವಾಯಿತು ರವಿಗೆ.

★★★

“ಮಿ. ನಿರ್ಮಲ್ ಆ ದಿನ ನಡೆದ ಘಟನೆಯನ್ನು ಮತ್ತೆ ನಮ್ಮವರು ಆಕ್ಟ್ ಮಾಡುತ್ತಾರೆ. ಅವತ್ತು ಏನೇನು ಹೇಗೆ ನಡೆಯಿತೋ ಹಾಗೆಯೇ ಮಾಡುತ್ತಾರೆ. ಕ್ರೈಂ ಸೀನ್ ರೀ ಕ್ರಿಯೇಟ್ ಮಾಡಿದರೆ ಏನಾದರೂ ಮಿಸ್ ಆಗಿದೆಯಾ ಅಥವಾ ಏನಾದರೂ ಕ್ಲೂ ಸಿಗಬಹುದಾ ಅಂತ.”

ನಿರ್ಮಲ್ ಮತ್ತು ಅವನ ಹೆಂಡತಿ ತಲೆ ಆಡಿಸಿದರು.

ರವಿ ಮತ್ತು ಅವನ ಸಹಚರರು... ಆ ದಿನ ನಡೆದಂತೆಯೇ, ಬಾಗಿಲು ತಟ್ಟಿ, ಅಡುಗೆಯವನನ್ನು ಸಾಯಿಸಿದಂತೆ ಮಾಡಿ, ಅವರಿಬ್ಬರನ್ನು ಹೆದರಿಸಿ, ಕೀ ತೆಗೆದುಕೊಂಡು ಮೇಲೆ ಹೋಗಿ ಬೀರುವಿನಿಂದ ಲೂಟಿ ಮಾಡಿದ ಹಾಗೆ ನಾಟಕವಾಡಿ, ಕೆಳಕ್ಕೆ ಬಂದು ಅವರಿಬ್ಬರನ್ನು ರೂಂ ಗೆ ತಳ್ಳಿ ಬಾಗಿಲು ಹಾಕಿ ಓಡಿದರು.

“ಹೀಗೆನಾ ಆಗಿದ್ದು?” ಕೇಳಿದ ಧನಂಜಯ. ಹೌದೆಂದು ತಲೆ ಆಡಿಸಿದರು ಇಬ್ಬರೂ.

ಒಂದೆರಡು ನಿಮಿಷದಲ್ಲಿ ಒಳಬಂದ ರವಿ,

“ಸರ್ ಹನ್ನೆರಡು ನಿಮಿಷ ಮೂವತ್ತೆರಡು ಸೆಕೆಂಡ್ ಹಿಡಿಯಿತು...”

“ಏನು ನಿಮ್ಮ ನಾಟಕ ?” ನಿರ್ಮಲ್ ಕೇಳಿದ.

“ನಿಮ್ಮ ಕೇಸ್ ಸಾಲ್ವ್ ಆಯಿತು ನಿರ್ಮಲ್, ಈ ಕೊಲೆ ಮತ್ತು ರಾಬರಿಯ ಹಿಂದಿನ ಮಾಸ್ಟರ್ ಮೈಂಡ್‌ನನ್ನು ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ಅರೆಸ್ಟ್ ಮಾಡಲಿದ್ದೇವೆ.”

“ನನ್ನನ್ನು ಯಾಕೆ ಇಲ್ಲಿ ಕರೆದಿದ್ದು? ನಾನು ನನ್ನ ಲಾಯರ್ ಜೊತೆ ಮಾತಾಡಬೇಕು... ಏನು ನಡೀತಾ ಇದೆ ಇಲ್ಲಿ?” ಅಬ್ಬರಿಸುತ್ತಾ ಒಳಗಡೆ ನುಗ್ಗಿದ ಜಯರಾಂ.

“ಕೊಲೆ ನಡೆದ ಘಟನೆಯನ್ನು ರೀ ಕ್ರಿಯೇಟ್ ಮಾಡಿದೆವು ಜಯರಾಂ. ಈ ಕ್ರೈಂಗೆ ನಮಲ್ಲಿದ್ದ ಸಾಕ್ಷಿ ಆ ಸಿ.ಸಿ ಟೀವಿ ಕ್ಯಾಮೆರಾ ದೃಶ್ಯಗಳು. ಅದರ ಪ್ರಕಾರ ಇಡೀ ಕ್ರೈಂ ಏಳು ನಿಮಿಷದಲ್ಲಿ ನಡೆದಿದೆ. ಆದರೆ ನಿರ್ಮಲ್ ಹೇಳಿರುವಂತೆ ರೀ ಕ್ರಿಯೇಟ್ ಮಾಡಿದರೆ, ಕನಿಷ್ಠ ಹನ್ನೆರಡು ನಿಮಿಷ ಬೇಕು. ಅದಲ್ಲದೇ ಅಷ್ಟೊಂದು ಕೀ ಗಳಿರುವ ಗೊಂಚಲಿನಲ್ಲಿ ಯಾವುದೇ ಉದ್ವೇಗವಿಲ್ಲದೇ ಅಷ್ಟು ಕಡಿಮೆ ಸಮಯದಲ್ಲಿ ಬಾಗಿಲು ತೆರೆದು ಹಣ ದೋಚುವುದು ಅಸಾಧ್ಯದ ಮಾತು. ಅದರ ಅರ್ಥ ದೋಚಲು ಬಂದವರಿಗೆ ಎಲ್ಲಿ ಏನಿದೆ ಅದಕ್ಕೆ ಯಾವ ಕೀ ಎನ್ನುವುದರ ಅರಿವಿತ್ತು.” ಅವರ ಮಾತುಗಳಿಂದ ಮತ್ತಷ್ಟು ವ್ಯಗ್ರನಾದ ಜಯರಾಂ,

“ಅದೆಲ್ಲಾ ನನಗ್ಯಾಕೆ... ನನಗೆ ನಿಮ್ಮ ಕಮಿಷನರ್ ಗೊತ್ತು... ಒಂದು ಫೋನ್ ಮಾಡಿದರೆ ಸಾಕು...”ಅವನ ಮಾತುಗಳು ಕೇಳಿಸಲೇ ಇಲ್ಲವೆಂಬಂತೆ ಧನಂಜಯ್,

“ನಿಮಗೆ ರಾಮ್ ಲಾಲ್ ಸಾಹು ಗೊತ್ತಾ?” ಕೇಳಿದ.

“ಅವನ್ಯಾರು... ನನಗೆ ಗೊತ್ತಿಲ್ಲ.’’

“ಈ ಮನೆಯಲ್ಲಿ ಸತ್ತು ಬಿದ್ದಿದ್ದನಲ್ಲ ಅಡುಗೆಯವನು, ಅವನ ಹೆಸರೇ ಸಾಹು.”